

ಮೂಲತಃ ಮುಂಬೈಯವರಾದ ಶ್ರುತಿ ಕಾನಿಟ್ಕರ್ ಸಂಸ್ಕೃತ ಕವಯಿತ್ರಿ ಹಾಗೂ ಸಂಶೋಧನಾ ವಿದ್ಯಾರ್ಥಿನಿ. ಪ್ರಸ್ತುತ ಐಐಟಿ ಬಾಂಬೆಯಲ್ಲಿ ಸಂಸ್ಕೃತದಲ್ಲಿ ಪಿಎಚ್.ಡಿ. ವಿದ್ಯಾರ್ಥಿನಿ. ಸಂಸ್ಕೃತದಲ್ಲಿ ಕಾವ್ಯ, ಕಥೆ, ನಾಟಕಗಳನ್ನು ರಚಿಸಿದ್ದಾರೆ. ಶ್ರೀರಾಧೆಯ ಕುರಿತು ಬರೆದ ದೀರ್ಘ ಕಾವ್ಯ 'ಶ್ರೀಮತಿ ಚರಿತ್ರಮ್' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ ಲಭಿಸಿದೆ.

ಜನಾಬಾಯಿ, ಅಕ್ಕಮಹಾದೇವಿ, ಮೀರಾಬಾಯಿ ಇದ್ದರು. ಅವರೂ ಸವಾಲುಗಳನ್ನು ಎದುರಿಸಿರಬಹುದು.

ಸಮಾಜ, ರಾಜಕೀಯ, ಸೌಂದರ್ಯಶಾಸ್ತ್ರ, ಕಾವ್ಯ ಮತ್ತು ಕಲಾ ಪ್ರಕಾರಗಳು ಇಂದಿಗೂ ಪುರುಷ ಪ್ರಧಾನವಾಗಿದ್ದು, ಇವುಗಳನ್ನು ಮಹಿಳಾ ದೃಷ್ಟಿಕೋನದಿಂದ ನೋಡುವ ಅಗತ್ಯವಿದೆ. ಲಿಂಗ ನಿರಪೇಕ್ಷವಾಗಿರಬೇಕು ಎಂದು ನಾವು ಎಷ್ಟೇ ನಿರ್ಧರಿಸಿದರೂ ಅಪ್ರಜ್ಞಾಪೂರ್ವಕವಾಗಿ ಲಿಂಗತ್ವದ ಆಯಾಮವನ್ನೊಳಗೊಂಡ ಅಂಶಗಳು ನಮ್ಮ ಬರಹದಲ್ಲಿ ನುಸುಳಿಕೊಂಡುಬಿಡುತ್ತವೆ. ಹಾಗಾಗಿಯೇ, ಮಹಿಳೆಯಾಗಿ, ಬರಹಗಾರ್ತಿಯಾಗಿ ನಾನು ನಿರ್ದಿಷ್ಟ ಭಾವನೆಗಳನ್ನು ಯಾವುದೇ ಸಂಕೋಚವಾಗಲೀ ಇರಿಸುಮುರಿಸಾಗಲೀ ಇಲ್ಲದೇ ವ್ಯಕ್ತಪಡಿಸಬೇಕು ಎನಿಸುತ್ತದೆ.

3 ನಮ್ಮ ಹಿರಿಯ ತಲೆಮಾರಿನ ಲೇಖಕಿಯರು ಹಲವಾರು ಜವಾಬ್ದಾರಿಗಳನ್ನು ನಿಭಾಯಿಸಬೇಕಿತ್ತು. ತಮ್ಮ ಯಾವುದೇ ಜವಾಬ್ದಾರಿಗೆ ಬೆನ್ನು ಮಾಡುವುದಕ್ಕೆ ಅವರು ಸಿದ್ಧರಿರಲಿಲ್ಲ. ಆದ್ದರಿಂದ ಅವರ ಸೃಜನಶೀಲ ಬರವಣಿಗೆಗೆ ಸೀಮಿತ ಸಮಯ ಸಿಗುತ್ತಿತ್ತು. ಬರವಣಿಗೆಗೆ ಪ್ರಶಾಂತವಾದ ಹಾಗೂ ದೀರ್ಘವಾದ ಅವಧಿಯ ಅಗತ್ಯವಿದೆ. ಕೆಲವೊಮ್ಮೆ ಹೆಚ್ಚಿನ ಓದು ಅಗತ್ಯ. ಮಹಿಳೆಯ ಕುಟುಂಬವು ಪ್ರೋತ್ಸಾಹ ನೀಡದೇ ಇದ್ದಾಗ ಅವರಿಗೆ ಬರವಣಿಗೆಯನ್ನು ನಿಭಾಯಿಸುವುದು ಕಷ್ಟವಾಗುತ್ತದೆ. ನಾನು ಕಾಲೇಜು ವಿದ್ಯಾರ್ಥಿನಿಯಾದ್ದರಿಂದ ಈವರೆಗೆ ನನಗಿಷ್ಟವಾದ್ದನ್ನು ಬರೆಯುತ್ತಾ ಓದುತ್ತಾ ಬಂದಿರುವೆ. ಹಿರಿಯರಿಗೆ ಹೋಲಿಸಿದರೆ ಪ್ರಸ್ತುತ ನನ್ನ ಮುಂದಿರುವ ಸವಾಲುಗಳು ಬಹಳ ಚಿಕ್ಕವು.

4 ನನ್ನ ಮಾತೃಭಾಷೆ ಮರಾಠಿ. ಅದರಲ್ಲಿಯೇ ಕವನ, ಕಥೆಗಳನ್ನು ಬರೆದಿದ್ದೇನೆ. ಆದರೆ ನನಗೇಕೋ ಸಂಸ್ಕೃತ ಭಾಷೆಯತ್ತ ಆಸಕ್ತಿ ಮೂಡಿದ್ದರಿಂದ, ಆ ಭಾಷೆಯಲ್ಲಿ ಕವನಗಳನ್ನು ಬರೆಯಲು ಶುರು ಮಾಡಿದೆ. ಅದು ಹೆಚ್ಚು ಖುಷಿ